ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಹೌದು.

ಆ) ಸರ್ಕಾರದ ಆದಾಯ ಹೆಚ್ಚಿಸಲು.

ಇ) ಪರಿಶೀಲಿಸಲಾಗುವುದು.

ಕೃಷಿ ವಿಶ್ವವಿದ್ಯಾನಿಲಯದಲ್ಲಿ ರೋಸ್ಟರ್ ಪದ್ಧತಿಯ ಬಡ್ತಿ

3561 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷಿ ವಿಶ್ವವಿದ್ಯಾನಿಲಯದಲ್ಲಿ ಖಾಲಿ ಹುದ್ದೆ ಭರ್ತಿ ಮಾಡುವಾಗ ಹಾಗೂ ಬಡ್ತಿ ಕೊಡುವಾಗ ಎಲ್ಲಾ ಕೇಡರ್‌ಗಳಲ್ಲಿ ರೋಸ್ಟರ್ ಸಿಸ್ಟಮ್(ನಿಯಮ) ಅನುಸರಿಸಲಾಗಿದೆಯೇ?

ಆ) ಕೆಲವು ಹುದ್ದೆಗಳಿಗೆ ಬಡ್ತಿ ಕೊಡುವಾಗ ರೋಸ್ಟರ್ ಸಿಸ್ಟಮ್ ಅನುಸರಿಸದೆ ಹರಿಜನರಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು) :

ಅ) ರಾಜ್ಯದಲ್ಲಿರುವ ಎರಡೂ ಕೃಷಿ ವಿಶ್ವ ವಿದ್ಯಾನಿಲಯಗಳಲ್ಲಿ ಮುಂಬಡ್ತಿ ಕೊಡುವಾಗ ರೋಸ್ಟರ್ ನಿಯಮವನ್ನು ಅನುಸರಿಸಲಾಗಿದೆ. ಆದರೆ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವಾಗ ಎರಡು ವಿಶ್ವ ವಿದ್ಯಾನಿಲಯಗಳಲ್ಲಿ ಮೀಸಲಾತಿ ನಿಯಮವನ್ನು ಕೆಲವು ಸಂದರ್ಭಗಳಲ್ಲಿ ಪಾಲಿಸದೆ ಇದ್ದರು ಸರ್ಕಾರದ ಗಮನಕ್ಕೆ ಬಂದಿದ್ದು, ಅದರ ಬಗ್ಗೆ ವಿಚಾರಣೆಗಳು ನಡೆಯುತ್ತಿದ್ದು ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಆ) ಇಲ್ಲ.

ಮೂಡಿಗೆರೆ ತಾಲ್ಲೂಕಿನಲ್ಲಿ ಆನೆಗಳ ಹಾವಳಿಯಿಂದ ಬೆಳೆಗಳ ನಷ್ಟ

3623 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಈ ವರ್ಷ ಮೂಡಿಗೆರೆ ತಾಲ್ಲೂಕಿನಲ್ಲಿ ಆನೆಗಳ ಹಾವಳಿಗಳಿಂದ ನಷ್ಟವಾದ ಕೃಷಿ ಬೆಳೆಯ ಮೊತ್ತವೆಷ್ಟು?

ಆ) ಸರ್ಕಾರ ಇದುವರೆಗೂ ಬಿಡುಗಡೆ ಮಾಡಿದ ಪರಿಹಾರ ಮೊತ್ತ ಎಷ್ಟು? ಇನ್ನೂ ಎಷ್ಟು ಹಣ ಬೇಕಾಗುತ್ತದೆ?

ಇ) ಯಾವ ಅಳತೆಗೋಲಿನಿಂದ ಪರಿಹಾರ ಹಣ ನಿಗಧಿಪಡಿಸಲಾಗಿದೆ?

ಶ್ರೀ ಆ.ಟಿ.ಶಂಭುನಾಥ್ (ಅರಣ್ಯ ರಾಜ್ಯ ಸಚಿವರು):

ಅ) ರೂ. 77,400-00

ಆ) ರೂ. 15,840-00 ಬಿಡುಗಡೆ ಮಾಡಿದ ಮೊತ್ತ.
ರೂ. 44,510-00 ಬೇಕಾಗುವ ಹಣ

ಇ) ವಲಯ ಅರಣ್ಯಾಧಿಕಾರಿಗಳು ಸ್ಥಳಃ ನಷ್ಟಕ್ಕೊಳಗಾದ ಜಮೀನನ್ನು ಪರಿಶೀಲನೆ ಮಾಡಿ ಭೂ ಒಡೆಯ ಮತ್ತು ಪಂಚರ ಸಮಕ್ಷಮ ಮಹಜರು ಮಾಡಿ ಫಸಲು ನಷ್ಟವನ್ನು ಅಂದಾಜು ಮಾಡಿ ಪರಿಹಾರ ಮೊತ್ತವನ್ನು ಸೂಚಿಸುವರು. ಇವರ ವರದಿಯ ಆಧಾರದ ಮೇಲೆ ಪರಿಹಾರ ಧನವನ್ನು ನಿಗಧಿಪಡಿಸಲಾಗುವುದು.